# ಶ್ರೀ ಶ್ರೀನಾಥ ತೀರ್ಥರು

ಪ್ರಾರ್ಥಿತಾಭೀಷ್ಟಸಂತಾನ: ಪ್ರತ್ಯರ್ಥಿಮತಭಂಜನ: ।

ಶ್ರೀನಾಥತೀರ್ಥಗುರುರಾಟ್ ಈಪ್ಸಿತಾರ್ಥಪ್ರದೋಸ್ತುನ: ।

## ವೃಂದಾವನ–ತಿರುಮಕೂಡಲು



Sri Shreenatha Theertharu
1770-1780 , Thirumakoodalu

## ಕಾಲ – 1770-1780

**ವೃಂದಾವನ ಪ್ರವೇಶ – ಕೃ.ಶ.1780ನೇ ಪುಷ್ಯ ಶುದ್ಧ ಚತುರ್ಥಿ**

**ಗುರುಗಳು –ಶ್ರೀ ಜಗನ್ನಾಥ ತೀರ್ಥರು;**

**ಶಿಷ್ಯರು–ಶ್ರೀ ವಿದ್ಯಾನಾಥ ತೀರ್ಥರು**

ಇವರು ಘನವಿದ್ವಾಂಸರು, ಶತಾವಧಾನಿಗಳು. ವಿಶೇಷವಾಗಿ ಅನೇಕ ತೀರ್ಥಕ್ಷೇತ್ರಗಳನ್ನು ಸಂದರ್ಶಿಸಿದವರು. ದೇಶವಿದೇಶಗಳಲ್ಲಿ ವಾದಿನಿಗ್ರಹ ಮಾಡಿ ಕಾಶೀಕ್ಷೇತ್ರಕ್ಕೆ ಬಂದಾಗ, ಅಲ್ಲಿಯ ರಾಜನ ನೇತೃತ್ವದಲ್ಲಿ ದ್ವೈತಸಿದ್ಧಾಂತ ದಿಗ್ವಿಜಯ ಸಾಧಿಸಿ, ಇವರ ಪಾಂಡಿತ್ಯವನ್ನು ವಿದ್ವನ್ಮಂಡಲಿಯು ಘಂಟಾಘೋಷವಾಗಿ ಅಂಗೀಕರಿಸಿದ ಸೂಚಕವಾಗಿ ಶ್ರೀಮಠದಲ್ಲಿ ಶ್ರೀಗಳವರು ಸಂಚಾರ ಮಾಡುವ ಪಲ್ಲಕ್ಕಿಯ ಮುಂಭಾಗದಲ್ಲಿ ಹಾಕುವ, ಶ್ರೀ ಮಠಕ್ಕೆ ವಿಶೇಷ ಪ್ರಶಸ್ತಿಯಾಗಿ ಬಂದ ಸಿಂಹಲಲಾಟಕ್ಕೆ ಘಂಟೆಯನ್ನು ಕಟ್ಟಿ, ಆ ರಾಜನೂ, ಪಂಡಿತಮಂಡಳಿಯೂ ಶ್ರೀಗಳವರನ್ನು ಗೌರವಿಸಿದರು. ಇವರೂ ಪವಿತ್ರವಾದ ತಿರುಮಕೂಡಲಿನಲ್ಲಿ ತಮ್ಮ ಪರಮಗುರುಗಳಾದ ಶೇಷಚಂದ್ರಿಕಾಚಾರ್ಯರ ಸನ್ನಿಧಾನದಲ್ಲಿ ಬೃಂದಾವನಸ್ಥರಾಗಿದ್ದಾರೆ.

ಇವರ ಆರಾಧನೆಯನ್ನು ಪ್ರತಿವರ್ಷ ಪುಷ್ಯ ಶುದ್ಧ ಚತುರ್ಥಿಯಂದು ತಿರುಮಕೂಡಲಿನಲ್ಲಿ ಮತ್ತು ಬೆಂಗಳೂರು **ಶಾಕಾಂಬರಿ ನಗರದಲ್ಲಿರುವ ಶ್ರೀ ಸುಮಧ್ವಸೇವಾ ಸಮಿತಿಯ ರಾಯರ ಮಠದಲ್ಲಿ** ಅಂಥರಹಳ್ಳಿ ಮಾಧವಾಚಾರ್ಯರು (ಶ್ರೀನಾಥತೀರ್ಥರ ಪೂರ್ವಾಶ್ರಮ ವಂಶಸ್ಥರು) ಬಹಳ ಅದ್ದೂರಿಯಿಂದ ಐದು ಜನ ಅಲಂಕಾರ ಬ್ರಾಹ್ಮಣರನ್ನು ಕೂಡಿಸಿ, ಐದು ಜನ ಘನ ವಿದ್ವಾಂಸರುಗಳಿಂದ ಉಪನ್ಯಾಸ, ಅಲಂಕಾರ ಇತ್ಯಾದಿ ವ್ಯವಸ್ಥೆ ಮಾಡಿ ನೆರವೇರಿಸುತ್ತಾರೆ.

*ಸಂಗ್ರಹ – ನರಹರಿ ಸುಮಧ್ವ*